# ದಿನಾಂಕ:23-11-2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ.38 ಹೆಚ್.ಎಂ.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಹೆಚ್.ಭೀಮೇಶ್. ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾ.38ರ ನೋಡಲ್ ಅಧಿಕಾರಿಗಳು)
   ಬಿ.ಎನ್.ಲಕ್ಷ್ಮೀಶ್ ಗೌಡ, ಸಹಾಯಕ ಅಭಿಯಂತರರು,(ವಾರ್ಡ್ ನಂ.38) ಮತ್ತು ಸಂಚಾಲಕರು.
2. ರಮೇಶ್ ಸಹಾಯಕ ಕಂದಾಯ ಅಧಿಕಾರಿ. ಲಕ್ಷ್ಮಿದೇವಿನಗರ.
3. ನಾರಾಯಣ್. ಹಿರಿಯ ಆರೋಗ್ಯ ಪರಿವೀಕ್ಷಕರು. (ವಾರ್ಡ್ ನಂ.38)
4. ಸತೀಶ್. ಕಂದಾಯ ಪರಿವೀಕ್ಷಕರು. ಹೆಚ್.ಎಂ.ಟಿ.ವಾರ್ಡ್ ನಂ.38 .
5. ಡಾ॥ಜಿ.ಎಂ.ರೇಣುಕಾ ಪ್ರಸಾದ್. ಎಂ. ಓ.. ನಂದಿನಿ ಬಡಾವಣೆ.
6. ಬೈಲವೆಂಕಟಪ್ಪ ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38.
7. ಮೋಹಿನಿ. ಆಂಕ್ ವರ್ಕರ್ ವಾರ್ಡ್ ನಂ.38.
8. ರಾಜು ಮರ್ಷಲ್ ವಾರ್ಡ್ ನಂ.38.
9. ಕಾಂತರಾಜ್ ಮರ್ಷಲ್ ವಾರ್ಡ್ ನಂ.38.
10. ಧನಂಜಯ ಸೂಪರ್ ವೈಸರ್ ವಾರ್ಡ್ ನಂ.38.
11. ಹನುಮಂತಯ್ಯ. ಗುತ್ತಿಗೆದಾರು ವಾರ್ಡ್ ನಂ.38.

ಮಾನ್ಯ ಅಧ್ಯಕ್ಷರು. ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38ರ ಕಾರ್ಯದರ್ಶಿಗಳು ಹಾಗೂ ಕಂದಾಯ ಪರಿವೀಕ್ಷಕರನ್ನು ಸಭೆಯನ್ನುದ್ದೇಶಿಸಿ ಸ್ವಾಗತ ಕೋರಿದರು.

ಡಾ. ರೇಣುಕಾ ಪ್ರಸಾದ್ ರವರು ವಾರ್ಡ್ 38ರಲ್ಲಿ ಪಿ.ಹೆಚ್.ಸಿ. ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿದ್ದು. ಇದಕ್ಕೆ ಸಂಬಂಧಿಸಿದಂತೆ ಸಹಾಯಕ ಕಂದಾಯ ಅಧಿಕಾರಿಗಳು ಮತ್ತು ವಲಯ ಆರೋಗ್ಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುತ್ತದೆ. ಎಂದು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.

ಡಾ. ರೇಣುಕಾ ಪ್ರಸಾದ್ ರವರು ವಾರ್ಡ್ 38ರಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆಯಾಗಿದ್ದು. ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿರುತ್ತದೆ ಹಾಗೂ ಚುಚ್ಚುಮದ್ದು ನೀಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕ್ರಮಗಳು ಮುಂದುವರೆದಿರುತ್ತದೆ ಎಂದು ತಿಳಿಸಿರುತ್ತಾರೆ.

ಸಹಾಯಕ ಅಭಿಯಂತರರು ರವರು ಮಾತನಾಡಿ ಎಸ್.ಆರ್.ಎಸ್. ಸಿಗ್ನಲ್ ಬಳಿ ಮಳೆ ನೀರು ಹೆಚ್ಚು ಸಂಗ್ರಹವಾಗುತ್ತಿರುವುದರಿಂದ ಅದನ್ನು ತೆರವುಗೊಳಿಸುವ ಬಗ್ಗೆ ಹೆದ್ದಾರಿ ಪ್ರಾಧಿಕಾರಕ್ಕೆ ತಿಳಿಸಿರುವುದಾಗಿ ತಿಳಿಸಿರುತ್ತಾರೆ. ವಾರ್ಡ್‌ನಲ್ಲಿ ರಸ್ತೆ ಗುಂಡಿಗಳನ್ನು ಪತ್ತೆ ಮಾಡಿ ಕ್ರಮ ವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಕಟ್ಟಡಗಳ ಮಾಲೀಕರಿಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ನೋಟೀಸ್ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

Scanned with CamScanner

ಕಾರ್ಯದರ್ಶಿಗಳು ಮಾತನಾಡಿ ವಾರ್ಡ್‌ನಲ್ಲಿ ಯಾವುದೇ ಮರಗಳಾಗಲೀ ವಿದ್ಯುತ್ ಕಂಬಗಳು ಬಿದ್ದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಆರೋಗ್ಯ ಪರಿವೀಕ್ಷಕರು ಮಾತನಾಡಿ ಕಸ ವಿಂಗಡಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಹೆಚ್. ಭೀಮೇಶ್. ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

B. Sal

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.38

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner